# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

## ಸಿಸಿ.ನಂ. 258/2024

| | | | |
|---|---|---|---|
| ಸಾಕ್ಷಿದಾರರು | : | ಅನಿಲ್ ಕುಮಾರ್ | ಸಿ.ಡಬ್ಲ್ಯೂ : 4 |
| ತಂದೆ ಹೆಸರು | : | ನಾರಾಯಣಗೌಡ | ಪಿ.ಡಬ್ಲ್ಯೂ : 3 |
| ವಯಸ್ಸು | : | 37 ವರ್ಷ | |
| ವೃತ್ತಿ | : | ವ್ಯವಸಾಯ | |
| ವಾಸ ಸ್ಥಳ | : | ಬೇವಿನಕುಪ್ಪೆ ಗ್ರಾಮ | |

**ಸಾಕ್ಷಿಯನ್ನು ದಿಃ 02.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ದಿಃ 22.07.2024 ರಂದು ಚಾಸಾ.1 ಮತ್ತು ಆರೋಪಿ ಏನೋ ಬೈಕಿನ ವಿಚಾರವಾಗಿ ಗಲಾಟೆ ಮಾಡಿಕೊಂಡಿದ್ದರು. ಅದಕ್ಕಾಗಿ ನನ್ನನ್ನು ಕರೆಸಿದ್ದರು. ಚಾಸಾ.1, ನಾನು, ಶಿವು, ಮಂಜು ಠಾಣೆಗೆ ದೂರು ಕೊಡಲು ಹೋದಾಗ ಚಾಸಾ.1 ಮತ್ತು ಆರೋಪಿಯನ್ನು ಕೇಳಿ ರಾಜಿ ಬಗ್ಗೆ ಮಾತನಾಡಿದೆವು. ಆರೋಪಿ ರಾಜಿಗೆ ಒಪ್ಪಲಿಲ್ಲ. ಆರೋಪಿ ಚಾಸಾ.1 ರವರಿಗೆ ಹೊಟ್ಟೆ ಮತ್ತು ಎದೆ ಭಾಗಕ್ಕೆ ಕಚ್ಚಿದ್ದರು ಎಂದು ಚಾಸಾ.1 ರವರು ನನಗೆ ತಿಳಿಸಿದರು. ಚಾಸಾ.1 ರವರನ್ನು ನಾನು ಆಸ್ಪತ್ರೆಯಲ್ಲಿ ಹೋಗಿ ನೋಡಿದಾಗ ಎದೆ ಮತ್ತು ಹೊಟ್ಟೆ ಭಾಗದಲ್ಲಿ ಕಚ್ಚಿದ ಗುರುತುಗಳು ಇದ್ದವು. ಚಾಸಾ.1 ಮತ್ತು ಆರೋಪಿ ಚೆನ್ನಾಗಿದ್ದರು. ತಿಂದು ಕುಡಿದು ಏನೋ ಗಲಾಟೆ ಮಾಡಿಕೊಂಡಿದ್ದರು. ತೀರ್ಮಾನಕ್ಕೆ

ಚಾಸಾ.1 ರವರು ಒಪ್ಪದೆ ಇದ್ದರಿಂದ ಹಾಗೂ ಆರೋಪಿ ಬರದೇ ಇರುವುದರಿಂದ ನಿಮಗೆ ಇಷ್ಟ ಬಂದ ಹಾಗ ಮಾಡಿಕೊಳ್ಳಿ ಎಂದು ಹೇಳಿ ಬಂದೆವು. ಈ ಘಟನಾ ಸಂಬಂಧ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು ನಾನು ಹೇಳಿಕೆ ನೀಡಿದ್ದೇನೆ. ದಿಃ 21.07.2024 ರಂದು ಘಟನೆ ಜಯಂತಿ ನಗರದ ಇಟ್ಟಿಗೆ ಪ್ಯಾಕ್ಟರಿ ಬಳಿ ನಡೆದಿರುತ್ತದೆ. ಚಾಸಾ.1 ರವರಿಗೆ ಮೊದಲು ಪಾಂಡವಪುರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಂತರ ಮೈಸೂರು ಆಸ್ಪತ್ರೆಗೆ ಹೋಗಿ ಎಂದು ಸಲಹೆ ನೀಡಿದ ಮೇರೆಗೆ ಮೈಸೂರಿನ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡರು. ನಾನು ಸಹ ಹೋಗಿದ್ದೆನು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

2. ನಮ್ಮ ತಾಯಿಯ ತಂದೆ ಜಮೀನು ಜಯಂತಿ ನಗರದಲ್ಲಿ ಇರುವುದರಿಂದ ಚಾಸಾ.1 ರವರು ನನಗೆ ಪರಿಚಯವಾಗಿರುತ್ತಾರೆ. ಆರೋಪಿ ಸಹ ಪರಿಚಯ ಇರುತ್ತಾರೆ. ದಿಃ 22.07.2024 ರಂದು ನನ್ನನ್ನು ನ್ಯಾಯಕ್ಕೆ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಬಳಿಗೆ ಕರೆದಿದ್ದರು. ಚಾಸಾ.1 ರವರ ಮನೆಯಲ್ಲಿ ಸೇರಿಕೊಂಡು ಮಾತನಾಡೋಣ ಎಂದು ಕರೆದಿದ್ದರು. ನಾನು, ಕೆನ್ನಾಲು ಶಿವು, ರವಿಕುಮಾರ್ ಸಂಜೆ 7.00 ರಿಂದ 8.30 ರವರೆಗೆ ಸೇರಿದ್ದೆವು. ಆ ನ್ಯಾಯ ಮಾಡಲು ಸೇರಿದ್ದ ಜಾಗಕ್ಕೆ ಆರೋಪಿ ಬರಲಿಲ್ಲ. ಈಗ ಹೇಳಿರುವ ವಿಚಾರವನ್ನು ಪೊಲೀಸರ ಮುಂದೆ ಹೇಳಿರುತ್ತೇನೆ.

*3. ದಿಃ 22.07.2024 ರಂದು ಬೆಳಿಗ್ಗೆ 9.30 ರಿಂದ 11 ಗಂಟೆ ಒಳಗೆ ಆಸ್ಪತ್ರೆಗೆ ಹೋಗಿರುತ್ತೇನೆ. ದಿಃ 22.07.2024 ರಂದು ಚಾಸಾ.1 ರವರನ್ನು ನೋಡಿದಾಗ ಎದೆ ಮತ್ತು ಹೊಟ್ಟೆಗೆ ಕಚ್ಚಿದ ಗಾಯಗಳು ಆಗಿದ್ದವು ಎಂಬುದನ್ನು ಪೊಲೀಸರ ಮುಂದೆ ಹೇಳಿರುತ್ತೇನೆ. ಆರೋಪಿಯ ಬೈಕನ್ನು ಚಾಸಾ.1 ರವರು ತೆಗೆದುಕೊಂಡು ಹೋಗಿದ್ದು ವಾಪಸ್ಸು ಕೊಡಲು ಹೋದಾಗ ಈ ಘಟನೆ ನಡೆದಿರುತ್ತದೆ ಎಂದು ಚಾಸಾ.1 ರವರು ನನ್ನ ಬಳಿ ಹೇಳಿರುತ್ತಾರೆ. ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ.1 ಮತ್ತು ನೀವು ಸ್ನೇಹಿತರಾಗಿರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ಯಾವುದೇ ನ್ಯಾಯ ಪಂಚಾಯತಿ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನ್ಯಾಯ ಪಂಚಾಯತಿಗೆ ಬರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು***
***ಜೆ.ಎಂ.ಎಫ್.ಸಿ., ಪಾಂಡವಪುರ.***